ಫ್ಯಾಕ್ಸ್ : 08282 – 256154
ದೂರವಾಣಿ : 08282 – 257299, 256301-256308

ವೆಬ್‌ಸೈಟ್ : www.kuvempu.ac.in
ಇ-ಮೇಲ್ : cdckuvempu@gmail.com

# ಕುವೆಂಪು ವಿಶ್ವವಿದ್ಯಾಲಯ

ಕಾಲೇಜು ಅಭಿವೃದ್ಧಿ ಪರಿಷತ್ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451.

## ಆದೇಶ

ವಿಷಯ–: ಸ್ನಾತಕ ಪದವಿಗಳ ವಿಷಯ ಸಮೂಹಗಳನ್ನು ಪರಿಷ್ಕರಿಸುವ ಹಾಗೂ ಪದವಿ ತರಗತಿಗಳಿಗೆ ಭಾಷಾ ಪಠ್ಯಕ್ರಮಗಳನ್ನು ಅಳವಡಿಸುವ ಕುರಿತು

ಉಲ್ಲೇಖ:
1. ದಿನಾಂಕ 16–03–2019 ರಂದು ಉನ್ನತ ಶಿಕ್ಷಣ ಇಲಾಖೆ ವತಿಯಿಂದ ನಡೆದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು / ಕುಲಸಚಿವರ ಸಭೆಯ ನಿರ್ಣಯ.
2. ದಿನಾಂಕ 02–04–2019 ರಂದು ನಡೆದ ಕಾಲೇಜು ಪ್ರಾಂಶುಪಾಲರುಗಳ ಸಭೆಯ ನಿರ್ಣಯ.
3. ದಿನಾಂಕ 13–03–2019 ರಂದು ನಡೆದ ಕಲಾ ನಿಕಾಯದ ನಿರ್ಣಯ
4. ದಿನಾಂಕ 16–04–2019 ರಂದು ನಡೆದ ವಿದ್ಯಾವಿಷಯಕ ಪರಿಷತ್ ವಿಶೇಷ ಸಮಿತಿಯ ಸಭಾ ನಿರ್ಣಯ.
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16–04–2019

***

**ಪ್ರಸ್ತಾವನೆ :**

ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 16/03/2019 (ಉಲ್ಲೇಖ–1) ರಂದು ನಡೆದ ಎಲ್ಲಾ ವಿಶ್ವವಿದ್ಯಾಲಯದ ಕುಲಪತಿಗಳು / ಕುಲಸಚಿವರ ಸಭೆಯ ಚರ್ಚೆಯಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ವಿವಿಧ ಬಗೆಯ ವಿಷಯ ಸಮೂಹಗಳಿದ್ದು, ಕೆಲವೊಂದು ವಿಷಯ ಸಮೂಹಗಳಿಗೆ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದು, ಇನ್ನು ಕೆಲವು ವಿಷಯ ಸಮೂಹಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆಯದೆ ಇರುವ ಬಗ್ಗೆ ಹಾಗೂ ಅಂತಹ ವಿಷಯ ಸಮೂಹಗಳನ್ನು ಅನಾವಶ್ಯಕವಾಗಿ ಪದವಿಗಳಲ್ಲಿ ಅಳವಡಿಸುವುದು ಸೂಕ್ತವಲ್ಲವೆಂಬ ಅಭಿಪ್ರಾಯ ವ್ಯಕ್ತವಾಯಿತು. ಅಲ್ಲದೆ ಸದರಿ ವಿಷಯ ಸಮೂಹಗಳ ಪರೀಕ್ಷೆಗಳನ್ನು ಕ್ರಮಬದ್ಧವಾಗಿ ನಡೆಸಲು 45–50 ದಿನಗಳ ಕಾಲಾವಕಾಶ ಅವಶ್ಯವಿದ್ದು, ಇದರಿಂದಾಗಿ ಪರೀಕ್ಷಾ ಫಲಿತಾಂಶ ಪ್ರಕಟಿಸಲು ವಿಳಂಬವಾಗುತಿದ್ದು, ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿರುವ ಅಂಶಗಳನ್ನು ಪರಿಶೀಲಿಸಿದ ಸಭೆಯು ಕೆಲವು ವಿಷಯ ಸಮೂಹಗಳನ್ನು 2019–20 ನೇ ಸಾಲಿನಿಂದ ಅನ್ವಯವಾಗುವಂತೆ ರದ್ದುಪಡಿಸುವ ಬಗ್ಗೆ ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ.

ಉಲ್ಲೇಖ (1) ರ ಸರ್ಕಾರದ ಸಭೆಗೆ ಪೂರಕವಾಗಿ 02.04.2019 ರಂದು ನಡೆದ (ಉಲ್ಲೇಖ–2) ಕಾಲೇಜು ಪ್ರಾಂಶುಪಾಲರುಗಳ ಸಭೆ ಹಾಗೂ ವಿಶ್ವವಿದ್ಯಾಲಯದಲ್ಲಿ ವಿವಿಧ ದಿನಾಂಕಗಳಂದು ನಡೆದ ನಿಕಾಯಗಳ ಸಭೆಗಳಲ್ಲಿಯೂ ಸಹ ಪ್ರಸಕ್ತ ಸ್ನಾತಕ ಪದವಿಯಲ್ಲಿ ಕಲಾ ವಿಷಯದಲ್ಲಿ 52 ಸಮೂಹಗಳು ಹಾಗೂ ವಿಜ್ಞಾನ ವಿಷಯದಲ್ಲಿ 33 ವಿಷಯ ಸಮೂಹಗಳಿದ್ದು ಕೆಲವು ವಿಷಯಗಳಲ್ಲಿ ಅತೀ ಕಡಿಮೆ ಪ್ರವೇಶಾತಿ ಹೊಂದಿರುವ ವಿಷಯ ಸಮೂಹಗಳನ್ನು 2019–20ನೇ ಶೈಕ್ಷಣಿಕ ಸಾಲಿನಿಂದ ರದ್ದು ಪಡಿಸುವ ಬಗ್ಗೆ ವಿಸ್ತೃತ ಚರ್ಚೆ ನಡೆಸಿ ವಿದ್ಯಾರ್ಥಿಗಳು ಆಸಕ್ತಿ ವಹಿಸುವ ಹಾಗೂ ಹೆಚ್ಚು ಪ್ರವೇಶ ಪಡೆಯುವಂತಹ ವಿಷಯ ಸಮೂಹಗಳನ್ನು ಮಾತ್ರ ಕುವೆಂಪು ವಿಶ್ವವಿದ್ಯಾಲಯದಲ್ಲಿ ಅಳವಡಿಸುವ ಕುರಿತು ನಿರ್ಣಯಿಸಲಾಗಿದೆ.

..... ಮುಂದುವರಿದಿದೆ

ಉಲ್ಲೇಖ (1) ರ ಉನ್ನತ ಶಿಕ್ಷಣ ಇಲಾಖೆ ವತಿಯಿಂದ ನಡೆದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು / ಕುಲಸಚಿವರ ಸಭೆಯ ನಿರ್ದೇಶನ ಹಾಗೂ ಉಲ್ಲೇಖ (2) ರ ಕಾಲೇಜು ಪ್ರಾಂಶುಪಾಲರುಗಳ ಸಭೆಯ ನಿರ್ಣಯ ಮತ್ತು ಉಲ್ಲೇಖ (3) ರ ಕಲಾ ನಿಕಾಯದ ಸಭೆಗಳಲ್ಲಿನ ನಿರ್ಣಯದ ಬಗ್ಗೆ ಚರ್ಚಿಸಿ ಅಂತಿಮ ನಿರ್ಣಯ ಕೈಗೊಳ್ಳುವ ಸಲುವಾಗಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ದಿನಾಂಕ 16/04/2019 ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಮಿತಿಯ ಸಭೆಗೆ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಅವಶ್ಯಕವಲ್ಲದ ಕೆಲವು ವಿಷಯ ಸಮೂಹಗಳನ್ನು ರದ್ದುಪಡಿಸುವ ಬಗ್ಗೆ ಹಾಗೂ ಅದರ ಸಾಧಕ-ಬಾಧಕಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. ಮುಂದುವರಿದಂತೆ ಸದರಿ ಸಭೆಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷಾ ಪಠ್ಯಕ್ರಮಗಳನ್ನು ಬದಲಾಯಿಸುವ / ಪರಿಷ್ಕರಿಸುವ ಬಗ್ಗೆ ಪರಿಶೀಲಿಸಿದ ಸಭೆಯು ಭಾಷಾ ಪಠ್ಯಕ್ರಮ ವಿಷಯಕ್ಕೆ ಸಂಬಂಧಿಸಿದಂತೆ ಕಲಾ ನಿಕಾಯ, ವಿಜ್ಞಾನ ನಿಕಾಯ ಹಾಗೂ ವಾಣಿಜ್ಯ ನಿಕಾಯದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಪಠ್ಯಕ್ರಮಗಳನ್ನು ಪರಿಚಲಿಸಲು ನಿರ್ಣಯಿಸಲಾಯಿತು. ವಿದ್ಯಾವಿಷಯಕ ಪರಿಷತ್ ವಿಶೇಷ ಸಮಿತಿ ಸಭೆಯ ನಿರ್ಣಯ ಹಾಗೂ ಉಲ್ಲೇಖ (5) ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಈ ಆದೇಶ

**ಆದೇಶ ಸಂಖ್ಯೆ : ಕುವಿ:ಸಿಡಿಸಿ-1:2019-20:10** ದಿನಾಂಕ 18/04/2019

ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಉಲ್ಲೇಖ (4) ರ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಮಿತಿಯ ಸಭಾ ನಿರ್ಣಯ ಹಾಗೂ ಉಲ್ಲೇಖ (5) ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ (i) 2019-20 ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ಸ್ನಾತಕ ಪದವಿಯ ಕಲಾ ಮತ್ತು ವಿಜ್ಞಾನ ನಿಕಾಯಗಳಲ್ಲಿ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ವಿಷಯ ಸಮೂಹಗಳಿಗೆ ಮಾತ್ರ ಪ್ರವೇಶಾತಿಯನ್ನು ಮಾಡಿಕೊಳ್ಳುವಂತೆ ಆದೇಶಿಸಿದೆ. ಸದರಿ ಆದೇಶವು ಮೂರು / ನಾಲ್ಕು / ಐದು ಮತ್ತು ಆರನೆ ಸೆಮಿಸ್ಟರ್ ಪದವಿ ವಿದ್ಯಾರ್ಥಿಗಳಿಗೆ ಅನ್ವಯಿಸುವುದಿಲ್ಲ

| ಸ್ನಾತಕ ಪದವಿಯ ಕಲಾ ನಿಕಾಯ | | ಸ್ನಾತಕ ಪದವಿಯ ವಿಜ್ಞಾನ ನಿಕಾಯ | |
|---|---|---|---|
| **Group-A** | | **Group-A** | |
| 1 | History-Economics-Political Science | 1 | Physics-Chemistry-Mathematics |
| 2 | History-Economics-Sociology | 2 | Physics-Mathematics-Electronics |
| 3 | History-Economics-English | 3 | Chemistry-Botany-Zoology |
| 4 | History-Economics-Kannada | 4 | Physics-Mathematics-Computer Science |
| 5 | History-Political Science-Kannada | 5 | Chemistry-Zoology-Microbiology |
| 6 | History-Political Science-Sociology | 6 | Electronics-Maths-Computer Science |
| 7 | Economics-Sociology-Political Science | -- | |
| 8 | History-Kannada-Sociology | -- | |
| **Group-B** | | **Group-B** | |
| 9 | History-Kannada-Journalism | 7 | Chemistry-Zoology-Bio-Technology |
| 10 | History-English-Journalism | 8 | Chemistry-Botany-Bio-Technology |
| 11 | History-Psychology-Economics | 9 | Microbiology-Botany-Biochemistry |
| 12 | Psychology-Sociology-English | 10 | Chemistry-Botany-Biochemistry |
| 13 | Psychology-Journalism-English | | |
| -- | | 11 | Chemistry-Zoology-Biochemistry |

| Group-C | | Group-C | |
|---|---|---|---|
| 14 | History-Economics-Physical Education | 11 | Physics-Mathematics-Geology |
| 15 | History-Sociology-Home Science | 12 | Chemistry-Botany-Environmental Science |
| 16 | History-Linguistic-English | | |

ಮೇಲ್ಕಂಡ ಯಾವುದೇ ವಿಷಯ ಸಮೂಹಕ್ಕೆ 15 ವಿದ್ಯಾರ್ಥಿಗಳಿಗಿಂತ ಕಡಿಮೆ ಪ್ರವೇಶಾತಿ ಇದ್ದಲ್ಲಿ ಅಂತಹ ವಿಷಯ ಸಮೂಹ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಬೇರೆ ವಿಷಯ ಸಮೂಹಕ್ಕೆ ವರ್ಗಾಯಿಸಲು ಕಡ್ಡಾಯವಾಗಿ ಕ್ರಮ ಕೈಗೊಳ್ಳುವುದು.

(ii) ಭಾಷಾ ವಿಷಯ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಕಲಾ ನಿಕಾಯ, ವಿಜ್ಞಾನ ನಿಕಾಯ ಹಾಗೂ ವಾಣಿಜ್ಯ ನಿಕಾಯಗಳಿಗೆ ಪ್ರತ್ಯೇಕ ಪಠ್ಯಕ್ರಮಗಳನ್ನು ಪರಿಚಲಿಸಿದೆ.

ಆದೇಶದ ಮೇರೆಗೆ,

ಕುಲಸಚಿವ

ಕುಲಸಚಿವರು

ಕುವೆಂಪು ವಿಶ್ವವಿದ್ಯಾನಿಲಯ

ಜ್ಞಾನ ಸಹ್ಯಾದ್ರಿ

ಶಂಕರಘಟ್ಟ - 577 451

ಗೆ :

ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲಾ ಸಂಯೋಜಿತ ಹಾಗೂ ಎಲ್ಲಾ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಡಾ: ಬಿ.ಆರ್. ಅಂಬೇಡ್ಕರ ವೀಧಿ, ಬೆಂಗಳೂರು – 560 001.
2. ಎಲ್ಲಾ ನಿಕಾಯಗಳ ಡೀನರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
3. ಎಲ್ಲಾ ಅಧ್ಯಯನ ಮಂಡಳಿ ಅಧ್ಯಕ್ಷರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
4. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
5. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6. ಕುಲಸಚಿವರು (ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
7. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
8. ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
9. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
10. ಕುವೆಂಪು ವಿಶ್ವವಿದ್ಯಾಲಯದ ಎಲ್ಲಾ ಉಪಕುಲಸಚಿವರು / ಸಹಾಯಕ ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
11. ಕಛೇರಿ ಪ್ರತಿ.